**<u>ದಿನಾಂಕಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎಸ್.ಎಸ್ ವಕೀಲರಿಂದಃ</u>**

1) ವಾದಿ ನನ್ನ ಸಹೋದರ. ವಾದಿ ಸಲ್ಲಿಸಿರುವ ವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಅಣ್ಣಪ್ಪ ಮತ್ತು ಚಿನ್ನಮ್ಮನವರ ಆಸ್ತಿ, ಪಶ್ಚಿಮಕ್ಕೆ ದಾಸಪ್ಪ ಮತ್ತು ಜವರಯ್ಯನವರ ಆಸ್ತಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಚಿಕ್ಕಮರಿಯ್ಯಯ ಮತ್ತು ಮುತ್ತಮ್ಮನವರ ಆಸ್ತಿ ಇರುತ್ತದೆ. 1ನೇ ಪ್ರತಿವಾದಿಯು ವಾದಿಯ ಬಳಿ ಬಂದು ಜಾಗವನ್ನು ಕೇಳಿದ್ದರು ಎಂಬ ಬಗ್ಗೆ ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ. 1ನೇ ಪ್ರತಿವಾದಿಯು ತನ್ನ ಮಗನ ಮದುವೆ ಇತ್ತು ಎಂದು ಹೇಳಿದ್ದನ್ನು ಎಂದು ತೋರಿಸಲು ಮದುವೆಯ ಅಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿರುವುದಿಲ್ಲ. ಆತನ ಮಗನ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

2) 1ನೇ ಪ್ರತಿವಾದಿಯು 1992 ರಿಂದ ದಾವಾ ಸ್ವತ್ತಿನಲ್ಲಿ ಶೆಡ್ಡನ್ನು ನಿರ್ಮಿಸಿಕೊಂಡು ವಾಸ ಇರುತ್ತಾರೆ ಎಂದರೆ ಸಾಕ್ಷಿಯು ಆತ 2010-2012 ರ ನಂತರ ಬಾಡಿಗೆಗಾಗಿ ಅಲ್ಲಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ಬಾಡಿಗೆಗೆ ಕರಾರುಪತ್ರ ಮಾಡಿಲ್ಲ. ಬಾಯಿ ಮಾತಿನ ಮೇರೆಗೆ ಕರಾರು ಮಾಡಿಕೊಂಡಿದ್ದರು. ದಾವಾ ಸ್ವತ್ತು ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. 1ನೇ ಪ್ರತಿವಾದಿ ಮತ್ತು ಆತನ ಕುಟುಂಬದವರು ಶ್ರವಣಯ್ಯನ ತೋಪಿನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಅವರಿಗೆ ಪಂಚಾಯಿತಿ ವತಿಯಿಂದ ಉಚಿತ ಶೌಚಾಲಯವನ್ನು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

3) ನನಗೆ ಕನ್ನಡ ಓದಲು ಮಾತ್ರ ಬರುತ್ತದೆ. ಸಾಕ್ಷಿಯು ನಿಡಿ.1ರ ಭಾವಚಿತ್ರದಲ್ಲಿ 1ನೇ ಪ್ರತಿವಾದಿಯ ಹೆಂಡತಿ ಇರುವುದಾಗಿ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ನಾನು 1ನೇ ಪ್ರತಿವಾದಿಯನ್ನು ನೋಡಿರುತ್ತೇನೆ. ಸಾಕ್ಷಿಯು ನಿಡಿ.2ರ ಭಾವಚಿತ್ರವನ್ನು ನೋಡಿ ಅದರಲ್ಲಿ 1ನೇ ಪ್ರತಿವಾದಿ ಇರುವುದಾಗಿ ನುಡಿಯುತ್ತಾರೆ.

4) ವಾದಿಯು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದು ತೋರಿಸಲು ನೋಂದಾಯಿತ ಕ್ರಯಪತ್ರವನ್ನು ಹಾಜರುಮಾಡಿರುತ್ತೇನೆ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಸದರಿ ಪತ್ರದಲ್ಲಿ ಬರೆದಿರುವ ಚಕ್ಕುಬಂದಿ

ನನಗೆ ತಿಳಿದಿದೆ. ಸದರಿ ಪತ್ರದಲ್ಲಿ ಚಕ್ಕುಬಂದಿಯ ಪ್ರಕಾರಣ ಪೂರ್ವಕ್ಕೆ ಪೂರ್ವಕ್ಕೆ ಅಣ್ಣಪ್ಪ ಮತ್ತು ಚಿನ್ನಮ್ಮನವರ ಶೆಡ್ಡ್, ಪಶ್ಚಿಮಕ್ಕೆ ದಾಸಪ್ಪ ಮತ್ತು ಜವರಯ್ಯನವರ ಶೆಡ್ಡ್, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಚಿಕ್ಕಮರಿಯ್ಯಯ ಮತ್ತು ಮುತ್ತಮ್ಮನವರ ಖಾಲಿ ನಿವೇಶನ ಎಂದು ಇರುತ್ತದೆ. ಸದರಿ ಪತ್ರದಲ್ಲಿ ತಿಳಿಸಿರುವ ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕ್ರಯ ಪತ್ರದಲ್ಲಿ ತಿಳಿಸಿರುವ ಚಕ್ಕುಬಂದಿಯನ್ನು ತಿಳಿಸಿರುತ್ತೇನೆ.

5) ವಾದಿಯು ವಾದಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯ ವಿವರಗಳ ಬಗ್ಗೆ ನನಗೆ ಗೊತ್ತಿಲ್ಲ. 1992 ರಿಂದಲೂ 1ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಾಗಿ ಮತ್ತು ಅಲ್ಲಿ ಆತ ವಿದ್ಯುತ್ ಚ್ಛಕ್ತಿ ಸಂಪರ್ಕ ಪಡೆದು ಪ್ರತಿ ತಿಂಗಳು ವಿದ್ಯುತ್ ಚ್ಛಕ್ತಿ ಬಿಲ್ಲನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ವಿದ್ಯುತ್ ಚ್ಛಕ್ತಿ ಬಿಲ್ಲನ್ನು ಪಾವತಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕ ಎಂಬುದಾಗಿ ಪಂಚಾಯಿತಿಗೆ ತೆರಿಗೆ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಸೇರಿದ್ದರೂ ಸಹ ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6) ವಾದಿಯು ದಾವಾ ಸ್ವತ್ತನ್ನು ಮುತ್ತಯ್ಯನವರಿಂದ ಖರೀದಿ ಮಾಡಿರುತ್ತಾರೆ. ಆ ರೀತಿ ದಾವಾ ಸ್ವತ್ತನ್ನು ವಾದಿಯು 15.05.1992ರಲ್ಲಿ ಖರೀದಿ ಮಾಡಿದ್ದನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ವಾಸ ಇರುವ ಬಗ್ಗೆ ಆತನಿಗೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ಅಧಾರ್ ಕಾರ್ಡ್ ಇರುತ್ತದೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**